# ಅಪರ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಸೊರಬ

## ಸಿ.ಸಿ.ನಂ. 1221/2023

ಪಿರ್ಯಾದುದಾರರುಃ ಆನವಟ್ಟಿ ಪೊಲೀಸ ಠಾಣೆ,

ವಿರುದ್ಧ

ವೀರಪ್ಪಯ್ಯ ಗೌಡ ಮತ್ತು ಇತರರು

ದೋಷಾರೋಪಣೆ

ನಾನು ಶ್ರೀಮತಿ ಶಾರದಾ ಕೊಪ್ಪದ **B.A.L, LL.M(IPRs).** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಸೊರಬ ಈ ಮೂಲಕ ಆರೋಪಿತರಾದ,

1. ವೀರಪ್ಪಯ್ಯ ಗೌಡ ಬಿನ್ ಮಂಜಪ್ಪ ಗೌಡ, 39 ವರ್ಷ,
2. ರಂಜಿತಗೌಡ ಬಿನ್ ಈಶ್ವರಪ್ಪಗೌಡ, 28 ವರ್ಷ
3. ಚನ್ನಬಸಪ್ಪ ಗೌಡ ಬಿನ್ ರುದ್ರಪ್ಪಗೌಡ ಯಾನೆ ಕಲ್ಲಪ್ಪ, 59 ವರ್ಷ,
4. ಮಹೇಶ್ ಗೌಡ ಬಿನ್ ಮಂಜಪ್ಪಗೌಡ, 33 ವರ್ಷ,
5. ಈಶ್ವರ ಬಿನ್ ಬಸವಣ್ಣಪ್ಪಗೌಡ, 33 ವರ್ಷ,
6. ಸಂಜೀವ ಬಿನ್ ಶಿವಾಜಿಗೌಡ, 21 ವರ್ಷ,
7. ವೀರಂದ್ರ ಬಿನ್ಶಿವಾಜಿಗೌಡ , 30 ವರ್ಷ,
8. ದೇವರಾಜಗೌಡ ಬಿನ್ ಪ್ರೇಮಾನಾಥಗೌಡ, 26 ವರ್ಷ,
9. ಗಿರಿಸ್ವಾ ಮಿ ಬಿನ್ ಕೊಟ್ರಯ್ಯ, 48 ವರ್ಷ,
10. ವಿರೇಶ ಬಿನ್ ರಾಜು, 19 ವರ್ಷ,
11. ಮೃತ್ಯುಂಜಯಗೌಡ ಬಿನ್ ಬಸಪ್ಪಪಾಟೀಲ್, 53 ವರ್ಷ,
12. ಶಿವಾಜಿಗೌಡ ಬಿನ್ ಬಸಪ್ಪ ಗೌಡ, 57 ವರ್ಷ,
13. ದರ್ಶನ ಯಾನ ಕೆರೆಸ್ವಾಮಿ ಬಿನ್ ಮಲಕಗೌಡ, 28 ವರ್ಷ,
14. ವೇದನಾಂದ ಬಿನ್ ವೀರಪ್ಪಗೌಡ, 51 ವರ್ಷ,
15. ಶ್ರೀಮತಿ ಗಾಯಿತ್ರಮ್ಮ ಕೋಂ ಶಿವಾಜಿಗೌಡ, 44 ವರ್ಷ,
16. ಗಂಗಾಧರ ಗೌಡ ಬಿನ್ ನೀಲಕಂಠಗೌಡ, 38 ವರ್ಷ,
17. ನಿರಂಜನ ಬಿನ್ ಮವೌಲಿ ಚಂದ್ರೆಗೌಡ, 33 ವರ್ಷ,

ಎಲ್ಲರ ವಾಸಃ ಬೆಟ್ಟದಕೂರ್ಲಿ ಗ್ರಾಮ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಆದ ನಿಮ್ಮ ಮೇಲೆ ಮಾಡುವ ಆರೋಪಣೆಗಳೇನಂದರೇ,

ಮೊದಲನೆಯದಾಗಿ, ದಿನಾಂಕ **09.11.2021** ರಂದು ಸಂಜೆ 6.00 ಗಂಟೆ ಸಮಯದಲ್ಲಿ, ಸೊರಬ ತಾಲ್ಲೂಕು, ಆನವಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕಂತನಹಳ್ಳಿ ಗ್ರಾಮದ ಸರ್ವೆ ನಂ.4/1 ರ ಜಮೀನಿನಲ್ಲಿ ಆರೋಪಿತರಾದ ನೀವು ಮೆಕ್ಕೆ ಜೋಳದ ತೆನೆಗಳನ್ನು ಕಿತ್ತುಕೊಂಡು ಟ್ರ್ಯಾಕ್ಟರ್ ನಲ್ಲಿ ಹೇರಿಕೊಂಡು ಹೋಗುತ್ತಿರುವಾಗ ಚಾಸಾ.1 ರವರು ನಮಗೆ ಸೇರಿದ ಜಮೀನಿನಲ್ಲಿರುವ ಮೆಕ್ಕೆ ಜೋಳದ ತೆನೆಗಳನ್ನು ಯಾಕೆ ಕಿತ್ತು ಕೊಂಡು ಹೋಗುತ್ತೀರಾ ಎಂದು ಕೇಳಿದಕ್ಕೆ ಗುನ್ಹೆ ಮಾಡುವ ಏಕೋದ್ದೇಶ

ಹೊಂದಿ, ಅಕ್ರಮ ಕೂಟ ಸದಸ್ಯರಾಗಿ, ಆ ಮೂಲಕ ನೀವು ಭಾ.ದಂ.ಸಂ.ಕಲಂ 143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಎರಡನೆಯದಾಗಿ, ನೀವು, ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ, ಗುಹ್ನೆ ಮಾಡುವ ಏಕೋದ್ದೇಶದಿಂದ, ಅಕ್ರಮಕೂಟದ ಸದಸ್ಯರಾಗಿ, ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ 147 ಸಹ ವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರ

ಮೂರನೆಯದಾಗಿ, ನೀವು, ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ, ಗುಹ್ನೆ ಮಾಡುವ ಏಕೋದ್ದೇಶದಿಂದ, ಅಕ್ರಮಕೂಟದ ಸದಸ್ಯರಾಗಿ, ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ನಾಲ್ಕನೆಯದಾಗಿ, ನೀವು, ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ, ಗುಹ್ನೆ ಮಾಡುವ ಏಕೋದ್ದೇಶದಿಂದ, ಅಕ್ರಮಕೂಟದ ಸದಸ್ಯರಾಗಿ, ಚಾಸಾ.1 ರವರಿಗೆ 1 ಮತ್ತು 2 ನೇ ಆರೋಪಿತರಾದ ನೀವು ಮೈಕೈಗೆ ಮತ್ತು ಗುತ್ತಿಗೆಗೆ ಕೈಗಳಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುವುದು ಮತ್ತು ಚಾಸಾ.2 ರವರು ಚಾಸಾ.1 ರವರಿಗೆ ಬಿಡಿಸಲು ಬಂದಾಗ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.2 ರವರಿಗೆ ಮೈಕೈಗೆ ಕೈಯಿಂದ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಕೊನೇಯದಾಗಿ, ನೀವು, ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ, ಗುಹ್ನೆ ಮಾಡುವ ಏಕೋದ್ದೇಶದಿಂದ, ಅಕ್ರಮಕೂಟದ ಸದಸ್ಯರಾಗಿ, ಚಾಸಾ.1 ಮತ್ತು 2 ರವರಿಗೆ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506 ರ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಈ ಮೂಲಕ ಮೇಲ್ಕಾಣಿಸಿದ ಆರೋಪಣೆಯನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿದ್ದು ಸದರಿ ಆರೋಪಣೆಯ ವಿಚಾರಣೆಯು ನಿಮ್ಮ ಮೇಲೆ ನಡೆಯುತಕ್ಕದೆಂದು ಈ ಮೂಲಕ ಆದೇಶ ನೀಡುತ್ತೇನೆ.

**ದಿನಾಂಕಃ- 02.07.2024.**

ಅಪರ.ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಸೊರಬ